# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಧು .ಜಿ. ಮಾದೇಗೌಡ<br>(ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 916 |
| ಉತ್ತರಿಸಬೇಕಾದ ದಿನಾಂಕ | : | 27--12--2022 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಡ್ಯ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಸಾಲ ಮನ್ನಾ ಯೋಜನೆಯಲ್ಲಿ ಪ್ರಯೋಜನ ಪಡೆದಿರುವ ರೈತರುಗಳ ಸಂಖ್ಯೆ ಎಷ್ಟು; ಇದಕ್ಕಾಗಿ ಬಿಡುಗಡೆ ಮಾಡಲಾದ ಮೊತ್ತ ಎಷ್ಟು; ಸಾಲ ಮನ್ನಾ ಅಸಲು ಬ್ಯಾಂಕಿಗೆ ಬಿಡುಗಡೆಯಾಗಲು ಬಾಕಿಯಿರುವ ಮೊತ್ತವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td rowspan="2">ಸಹಕಾರ ಸಂಘಗಳ ರೂ.1 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿನ ಸಹಕಾರ ಸಂಘಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿ 1,08,766 ರೈತರಿಂದ ರೂ. 507.75 ಕೋಟಿಗಳ ಕ್ಲೇಂ ಮೊತ್ತ ಪಾವತಿಸಬೇಕೆಂದು ಗುರುತಿಸಿಕೊಳ್ಳಲಾಯಿತು.<br><br>ಪ್ರತಿ ಸಾಲಗಾರ ರೈತರ ಕ್ಲೇಂ ಮೊತ್ತದ ಸಂಬಂಧ ಕಾಲಂ 52 ಹಾಗೂ ರೈತರ ಸ್ವಯಂ ದೃಢೀಕರಣ ಪತ್ರದಲ್ಲಿನ ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ 1,05,945 ಅರ್ಹ ರೈತರನ್ನು ಹಸಿರು ಪಟ್ಟಿ (Green list) ಎಂದು ಪರಿಗಣಿಸಿ, ಇವರ ಬಾಬ್ತು ರೂ. 492.95 ಕೋಟಿಗಳಾಗಿದ್ದು, ಈ ಪೈಕಿ ಈವರೆಗೆ 1,05,920 ರೈತರ ರೂ. 492.83 ಕೋಟಿಗಳ ಸಾಲ ಮನ್ನಾ ಹಣವನ್ನು ವಿವಿಧ ಹಂತಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಪಾವತಿಸಲಾಗಿದೆ. ಇದರಲ್ಲಿ ಸಹಕಾರ ಸಂಘಗಳು ಉಳಿತಾಯ ಖಾತೆಯನ್ನು ತಪ್ಪಾಗಿ ಅಳವಡಿಸಿರುವ 25 ರೈತರ ರೂ.0.11 ಕೋಟಿ ಹಿಂದಿರುಗಿಸಲ್ಪಟ್ಟಿದೆ. ಹಸಿರು ಪಟ್ಟಿಯಲ್ಲಿ ಉಳಿದ 2,151 ರೈತರಿಗೆ ರೂ. 10.87 ಕೋಟಿಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ. ತಾಲ್ಲೂಕುವಾರು ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ.<br><br>(ರೂ.ಕೋಟಿಗಳಲ್ಲಿ)<br>
<table>
<tr><th>ಕ್ರ ಸಂ</th><th>ತಾಲ್ಲೂಕು</th><th>ಗುರುತಿಸಿರುವ ಒಟ್ಟು ರೈತರು</th><th>ಹಸಿರು ಪಟ್ಟಿಗೆ ಸೇರ್ಪಡೆ ಯಾಗಿರುವ ರೈತರು</th><th>ಈವರೆಗೆ ಪಾವತಿಸಿರುವುದು</th><th>ಉಳಿತಾಯ ಖಾತೆ ತಪ್ಪಾಗಿ ಹಿಂದಿರುಗಿಸಲ್ಪಟ್ಟಿರುವುದು</th><th>ಹಸಿರು ಪಟ್ಟಿಯಲ್ಲಿದ್ದು ಬಿಡುಗಡೆ ಯಾಗದಿರುವುದು</th><th>ಹಸಿರ ಪಟ್ಟಿಗೆ ಗುರುತಿಸ ಬೇಕಾದವು</th></tr>
</table></td></tr>
<tr><td>ಆ)</td><td>ಇದರಲ್ಲಿ ಹಸಿರು ಪಟ್ಟಿಯಲ್ಲಿರುವ ಮತ್ತು ಹಸಿರು ಪಟ್ಟಿಗೆ ಬರಲು ಬಾಕಿ ಇರುವ ರೈತರ ಸಂಖ್ಯೆ ಮತ್ತು ಮೊತ್ತ ಎಷ್ಟು; ಉಳಿತಾಯ ಖಾತೆ ತಪ್ಪಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು;</td></tr>
</table>

(ತಾಲ್ಲೂಕುವಾರು ಮಾಹಿತಿ ನೀಡುವುದು)

| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
|---|---|---|---|---|---|---|---|---|---|---|---|---|---|
| 1 | ಮಂಡ್ಯ | 24703 | 109.43 | 24086 | 106.77 | 24086 | 106.77 | 0 | 0.[illegible] | 444 | 1.88 | 173 | 0.79 |
| 2 | ಮದ್ದೂರು | 20802 | 99.91 | 20146 | 96.06 | 20146 | 96.06 | 0 | 0.0 | 583 | 3.38 | 73 | 0.47 |
| 3 | ಮಳವಳ್ಳಿ | 17272 | 84.55 | 16751 | 81.50 | 16735 | 81.43 | 16 | 0.07 | 337 | 1.76 | 184 | 1.28 |
| 4 | ಪಾಂಡವಪುರ | 8982 | 41.49 | 8653 | 39.73 | 8650 | 39.71 | 3 | 0.02 | 235 | 1.09 | 94 | 0.67 |
| 5 | ಶ್ರೀ ರಂಗಪಟ್ಟಣ | 8899 | 39.37 | 8523 | 37.54 | 8522 | 37.54 | 1 | 0.00 | 310 | 1.58 | 66 | 0.24 |
| 6 | ಕೆ ಆರ್ ಪೇಟೆ | 17531 | 90.31 | 17364 | 89.25 | 17361 | 89.24 | 3 | 0.01 | 136 | 0.74 | 31 | 0.33 |
| 7 | ನಾಗಮಂಗಲ | 10577 | 42.68 | 10422 | 42.09 | 10420 | 42.08 | 2 | 0.01 | 106 | 0.43 | 49 | 0.17 |
| | **Total** | 108766 | 507.75 | 105945 | 492.95 | 105920 | 492.83 | 25 | 0.11 | 2151 | 10.87 | 670 | 3.94 |

| | | |
|---|---|---|
| ಇ) | ಹಸಿರು ಪಟ್ಟಿಯಲ್ಲಿ ಸಾಲ ಮನ್ನಾ ಮಾಡಲು ಅರ್ಹತೆ ಗುರುತಿಸಿರುವ ಪ್ರಕರಣಗಳಲ್ಲಿ ಈ ಮೊತ್ತವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಸಲ್ಲಿಸಿರುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ. (ವಿವರ ನೀಡುವುದು) | ರಾಜ್ಯದಲ್ಲಿನ 31,003 ರೈತರ ಬಾಬ್ತು ರೂ. 167.51 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಮಂಡಿಸಿದ್ದು, ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |
| ಈ) | ರೈತರ ತಪ್ಪಾಗಿರುವ ಉಳಿತಾಯ ಖಾತೆಗಳ ಪಟ್ಟಿಯನ್ನು ಸಾಲ ಮನ್ನಾ ವಿಶೇಷ ಕೋಶಕ್ಕೆ ಸಲ್ಲಿಸಿ ಯಾವ ಕಾಲ ಮಿತಿಯೊಳಗೆ ಸರಿಪಡಿಸಲಾಗುವುದು (ವಿವರ ನೀಡುವುದು) | ಉಳಿತಾಯ ಖಾತೆ ತಪ್ಪಾಗಿ ಪಾವತಿಸಲು ಬಾಕಿ ಇರುವ 25 ರೈತ ಸದಸ್ಯರ ರೂ.0.11 ಕೋಟಿಗಳ ಸಾಲ ಮನ್ನಾ ಮೊತ್ತಕ್ಕೆ ಸಂಬಂಧಿಸಿದಂತೆ ಸಹಕಾರ ಸಂಘಗಳು ಎರಡನೇ ಬಾರಿಯೂ ಸಹ ತಪ್ಪಾಗಿ ಅಳವಡಿಸಿರುವುದರಿಂದ ಪುನಃ National Electronic Fund Transfer (NEFT) ವಾಪಸ್ ಆಗಿರುತ್ತದೆ. ಇಂತಹ ಖಾತೆಗಳ ರೈತರ ಪಟ್ಟಿಯನ್ನು ಸಹಕಾರ ಸಂಘಗಳ ನಿಬಂಧಕರು ಪತ್ರ ಸಂಖ್ಯೆ: ಸಿಆರ್‌ಡಿ/ ಸಿಎಬಿ–1/33/2018–19 ದಿ.24–02–2022 ರ ಮೂಲಕ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ರವರಿಗೆ ಸಲ್ಲಿಸಿ ಮೂರನೇ ಬಾರಿಗೆ ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ಕೋರಲಾಗಿರುತ್ತದೆ. |
| ಉ) | ಸಾಲ ಮನ್ನಾ ಅರ್ಹತೆ ಗುರುತಿಸದೆ ಇರಲು ಕಾರಣಗಳೇನು ಹಾಗೂ ಪ್ರಕರಣಗಳೆಷ್ಟು; ಅರ್ಹತೆ | ಸರ್ಕಾರದ ಸಾಲ ಮನ್ನಾ ಯೋಜನೆಯನ್ನು ಫಲಾನುಭವಿ ರೈತರಿಗೆ ತಲುಪಿಸಲು ಇಲಾಖೆಯಿಂದ ಕಾಲಕಾಲಕ್ಕೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ತಂತ್ರಾಂಶದಲ್ಲಿ ಮಾಹಿತಿಯನ್ನು ಅಳವಡಿಸುವ ಸಂದರ್ಭದಲ್ಲಿ ಸಾಲಗಾರ ರೈತರು ಸಮರ್ಪಕ ಮಾಹಿತಿ ನೀಡದಿರುವುದು, ಸಂಘಗಳ ಹಂತದಲ್ಲಿ ತಪ್ಪು ಮಾಹಿತಿಯನ್ನು ಅಳವಡಿಸುವುದು ಹಾಗೂ ತಂತ್ರಾಂಶದಲ್ಲಿ ಬದಲಾವಣೆಗಳನ್ನು ಕೋರಿರುವ ಹಿನ್ನಲೆಯಲ್ಲಿ 670 ಜನರಿಗೆ ಹಸಿರು ಪಟ್ಟಿಗೆ ಗುರುತಿಸಲು ವಿಳಂಬವಾಗಿರುತ್ತದೆ. |

<table>
<tr>
<td></td>
<td>ಗುರುತಿಸಲು ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು)</td>
<td>
ಪ್ರಕರಣವಾರು ವಿವರ ಈ ಕೆಳಗಿನಂತಿರುತ್ತದೆ.
<table>
<tr><th>ಕ್ರಮ ಸಂಖ್ಯೆ</th><th>ಕಾರಣಗಳು</th><th>ರೈತರ ಸಂಖ್ಯೆ</th></tr>
<tr><td>1</td><td>ಈಗಾಗಲೇ ಸಾಲ ಮನ್ನಾ ತಂತ್ರಾಂಶದಲ್ಲಿ ಅಳವಡಿಸಿರುವ ರೇಷನ್‌ಕಾರ್ಡ್ ಚಾಲ್ತಿಯಲ್ಲಿ ಇಲ್ಲದಿರುವ ಪ್ರಕರಣಗಳು</td><td>210</td></tr>
<tr><td>2</td><td>ಸಾಲ ವಿತರಿಸಿದ ದಿನಾಂಕ ಹಾಗೂ ಸಾಲದ ತಗಾದೆ ದಿನಾಂಕ ಮತ್ತು ಸಾಲದ ಹೊರಬಾಕಿ ಮೊತ್ತ ತಪ್ಪಾಗಿ ನಮೂದಿಸಿರುವ ಪ್ರಕರಣಗಳು</td><td>52</td></tr>
<tr><td>3</td><td>ಎಫ್‌ಎಸ್‌ಡಿ ಫೈಲ್ ಆಗಿದ್ದು ಟಿ.ಎಲ್.ಸಿ ಯಲ್ಲಿ ಗೋಚರವಾಗದ ಪ್ರಕರಣಗಳು</td><td>41</td></tr>
<tr><td>4</td><td>ಸಾಲ ಮನ್ನಾ ತಂತ್ರಾಂಶದ ಕಾಲಂ 52 ರಲ್ಲಿ ಸಾಲದ ತರಹೆ ತಪ್ಪಾಗಿ ನಮೂದಿಸಿರುವ ಪ್ರಕರಣಗಳು</td><td>92</td></tr>
<tr><td>5</td><td>ರೈತರ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಸಂಖ್ಯೆಯನ್ನು ತಪ್ಪಾಗಿ ನಮೂದಿಸಿರುವ ಪ್ರಕರಣಗಳು.</td><td>275</td></tr>
<tr><td></td><td>ಒಟ್ಟು</td><td>670</td></tr>
</table>
ಈ ಕುರಿತು ಅರ್ಹ ರೈತರಿಗೆ ಸಾಲ ಮನ್ನಾ ಯೋಜನೆ ದೊರಕಿಸಿಕೊಡಲು ಮಂಡ್ಯ ಜಿಲ್ಲೆ ಒಳಗೊಂಡು ರಾಜ್ಯದ ಒಟ್ಟು ಗುರುತಿಸಲ್ಪಟ್ಟ ರೈತರ ಪೈಕಿ ಪ್ರಸ್ತುತ 13,334 ರೈತರ ಮಾಹಿತಿಗಳನ್ನು ಪರಿಶೀಲಿಸಿ ಹಸಿರು ಪಟ್ಟಿಗೆ ಸೇರ್ಪಡೆ ಮಾಡುವ ಸಂಬಂಧ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ರವರಿಗೆ ನಿಬಂಧಕರಿಂದ ಪತ್ರ ಸಂಖ್ಯೆ ಸಿಆರ್‌ಡಿ/ಸಿಎಬಿ–1/33/2019–20 ದಿ.24–02–2022 ಮತ್ತು ಸರ್ಕಾರದಿಂದ ಅರೆ ಸರ್ಕಾರಿ ಪತ್ರ ಸಿಒ 168 ಸಿಎಲ್‌ಎಸ್ 2022 ದಿನಾಂಕ:13–04–2022 ಗಳ ಮೂಲಕ ಕೋರಲಾಗಿದೆ.
</td>
</tr>
</table>

**ಸಂಖ್ಯೆ: ಸಿಒ 456 ಸಿಎಲ್‌ಎಸ್ 2022**

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು